# ಸ್ವಾಮಿ ವಿವೇಕಾನಂದರು ಮತ್ತು ಉಪನಿಷತ್ತುಗಳು

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

ಪ್ರೊ. ರಾಮಚಂದ್ರಸ್ವಾಮಿ

ವಿವೇಕಾನಂದರ ಕಾಲದಲ್ಲಿ ಉಪನಿಷತ್ತುಗಳ ಬಗ್ಗೆ ಪಶ್ಚಿಮ ದೇಶಗಳಲ್ಲಿ ಎಷ್ಟು ಗೊತ್ತಿತ್ತು? ದಾರಾ ಶಿಕೋ (೧೬೫೬-೫೭) ಪಂಡಿತರಿಂದ ಐವತ್ತು ಉಪನಿಷತ್ತುಗಳನ್ನು ಪರ್ಶಿಯನ್ ಭಾಷೆಗೆ ತರ್ಜುಮೆ ಮಾಡಿಸಿದ. ಭಾರತದಲ್ಲಿ ಸೈನಿಕನಾಗಿದ್ದು ಭಾರತೀಯ ಭಾಷೆಗಳನ್ನು ಕಲಿತಿದ್ದ ಅಬ್ರಹಾಂ ಹ್ಯಾಸಿಂತ್ ಆಂಕುಟಿಲ್ ಡ್ಯೂ ಪೆರ್ರನ್ (೧೭೩೧-೧೮೦೫) ಎಂಬಾತನು ಇದನ್ನು ಲ್ಯಾಟಿನ್‌ಗೆ ಅನುವಾದ ಮಾಡಿದನು. ಸ್ಟ್ರಾಸ್‌ಬರ್ಗ್‌ನಲ್ಲಿ ಎರಡು ಸಂಪುಟಗಳಲ್ಲಿ ಪ್ರಕಟವಾದ (೧೮೦೨) ಇದನ್ನು ಮ್ಯಾಕ್ಸ್ ಮುಲ್ಲರ್ ಇಂಗ್ಲಿಷಿನ ತನ್ನ ಉಪನಿಷತ್ತುಗಳ ಅವತರಣಿಕೆಯಲ್ಲಿ ಉಲ್ಲೇಖಿಸುತ್ತಾನೆ; ಅಲ್ಲದೆ ಜರ್ಮನ್ ತತ್ತ್ವಶಾಸ್ತ್ರಜ್ಞ ಶೋಪೆನ್‌ಹೋವರ್ ಮೇಲೆ ಉಪನಿಷತ್ತುಗಳು ಬೀರಿದ ಪ್ರಭಾವವನ್ನೂ ತಿಳಿಸುತ್ತಾನೆ. ಮ್ಯಾಕ್ಸ್ ಮುಲ್ಲರ್‌ರ ಪುಸ್ತಕಗಳನ್ನು ಬಹುಶಃ ನೋಡಿದ್ದ ವಿವೇಕಾನಂದರಿಗೆ ಈ ಪುಸ್ತಕಗಳ ವಿಚಾರ ತಿಳಿದಿರಬಹುದು. ವಿವೇಕಾನಂದರು ೧೮೯೭ರ ಜನವರಿ ೧೬ರ ತಮ್ಮ ಕೊಲಂಬೋ ಭಾಷಣದಲ್ಲಿ ಒಂದು ಮಾತನ್ನು ವಿಶೇಷವಾಗಿ ಉಲ್ಲೇಖಿಸಿದ್ದಾರೆ: ಈ ಶತಮಾನದ ಪ್ರಾರಂಭದಲ್ಲಿ, ವೇದಗಳ ಹಳೆಯದೊಂದು ಅಸಮರ್ಪಕ ಪರ್ಶಿಯನ್ ಅನುವಾದದಿಂದ ಫ್ರೆಂಚನೊಬ್ಬ ಲ್ಯಾಟಿನ್‌ಗೆ ಮಾಡಿದ ಅನುವಾದವನ್ನು ಅಭ್ಯಸಿಸಿದ ಜರ್ಮನ್ ತತ್ತ್ವಶಾಸ್ತ್ರಜ್ಞ ಶೋಪೆನ್‌ಹೋವರ್ ಹೇಳಿದ್ದಾನೆ: "ಇಡೀ ಪ್ರಪಂಚದಲ್ಲಿ ಉಪನಿಷತ್ತುಗಳಂತಹ ಉನ್ನತಿಕಾರಕವೂ, ಪರಮ ಫಲದಾಯಕವೂ ಆದ ಅಧ್ಯಯನ ಇನ್ನೊಂದಿಲ್ಲ. ಅದು ನನ್ನ ಬದುಕಿನ ನೆಮ್ಮದಿ; ನನ್ನ ಸಾವಿನ ನೆಮ್ಮದಿಯೂ ಅದೇ" ಪಾಶ್ಚಾತ್ಯರ ಬುದ್ಧಿಮತ್ತೆಗೆ ಉಪನಿಷತ್ತುಗಳು ರುಚಿಸಬಹುದು ಎಂದು ವಿವೇಕಾನಂದರು ಭಾವಿಸಿದ್ದರೆಂದು ಇದರಿಂದ ಊಹಿಸಬಹುದು. ಆದರೆ ಈ ಅನುವಾದಗಳ ಹಾಗೂ ಉಪನಿಷತ್ತುಗಳ ಬಗೆಗಿನ ಶೋಪೆನ್‌ಹೋವರನ ಭಾವೋನ್ಮತ್ತ ಪ್ರಶಂಸೆ ಇತ್ಯಾದಿಗಳು ಪಶ್ಚಿಮದ ಸಾಮಾನ್ಯ ವಿದ್ಯಾವಂತನಿಗೆ ತಿಳಿದಿರುವ ಸಾಧ್ಯತೆ ಕಡಿಮೆ ಎಂಬುದನ್ನೂ ವಿವೇಕಾನಂದರು ಅರಿತುಕೊಂಡಿದ್ದರು. ತಮ್ಮ ಪರಮಕುಡಿ ಉಪನ್ಯಾಸದಲ್ಲಿ "ಯೂರೋಪನ್ನು ಉಳಿಸುವುದೇ ಉಪನಿಷತ್ತುಗಳಲ್ಲಿನ ಧರ್ಮ" ಎಂದಿರುವ ವಿವೇಕಾನಂದರಿಗೆ ಅಮೆರಿಕ, ಇಂಗ್ಲೆಂಡು ಗಳಲ್ಲಿ ಉಪನಿಷತ್ತುಗಳ ಬಗ್ಗೆ ಮಾತನಾಡುವಾಗ ಅಪ್ರತಿಮ ಆತ್ಮವಿಶ್ವಾಸ ಇದ್ದಿತೆಂದು ತಿಳಿಯಬಹುದು.

ಅಮೆರಿಕಾದ ಟ್ರಾನ್ಸೆಂಡೆಂಟಲ್ ಚಳುವಳಿಯ ಎಮರ್ಸನ್, ಥೋರೋ ಮೊದಲಾದ ನೇತಾರರಂಥ ಕೆಲವರಿಗಾದರೂ ಉಪನಿಷತ್ತುಗಳ ಸಂದೇಶಸಾರ ತಿಳಿದಿತ್ತು ಎಂದು ವಿವೇಕಾನಂದರು ಅಂದುಕೊಂಡಿದ್ದಿರಬಹುದು. ಅಮೆರಿಕನ್ ತತ್ತ್ವಶಾಸ್ತ್ರಜ್ಞ ಜೋಸಿಯಾ ರಾಯ್ಸ್ (೧೮೫೫-೧೯೧೬) ನ ಏಕತ್ವ ಆದರ್ಶವಾದದ ಛಾಯೆ ಎಮರ್ಸನ್ನನ ಕಾವ್ಯಗಳಲ್ಲಿ ಇದೆ ಎಂದು ಹಾರ್ವರ್ಡ್‌ನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದ ರಾಕ್‌ವೆಲ್ ಲನ್‌ಮನ್ ತಮ್ಮ ೧೮೯೦ರಲ್ಲಿ ಪ್ರಕಟವಾದ *The Beginnings of Hindu Pantheism* (ಹಿಂದುಗಳ ವಿಶ್ವ ದೇವೈಕ್ಯವಾದದ ಪ್ರಾರಂಭ) ಗ್ರಂಥದಲ್ಲಿ ಗುರುತಿಸಿದ್ದಾರೆ. ಉದಾಹರಣೆಗೆ, **'If the red slayer thinks he slays...'** (ಕೆಂಪು ಬಣ್ಣದ ಕಟುಕ ತಾನು ಕೊಲ್ಲುತ್ತಿರುವೆನೆಂದು ಭಾವಿಸಿದರೆ)– ಈ ಪದ್ಯ, ಇದನ್ನು ವಿವೇಕಾನಂದರು ನೋಡಿದ್ದರೂ ನೋಡಿರಬಹುದು. ಸ್ವಾಮಿಜಿ ೧೮೯೬ರಲ್ಲಿ ಕೊಟ್ಟ ತಮ್ಮ ಹಾರ್ವರ್ಡ್ ಉಪನ್ಯಾಸದಲ್ಲಿನ ಉಪನಿಷತ್ತುಗಳ ವಿವರಣೆಯನ್ನು ಆಧರಿಸಿಯೇ ರಾಯ್ಸ್ ತನ್ನ *The World and the Individual* (ಪ್ರಪಂಚ ಮತ್ತು ವ್ಯಕ್ತಿ) ಗ್ರಂಥದಲ್ಲಿ ***ತತ್ ತ್ವಂ ಅಸಿ*** ಮಹಾವಾಕ್ಯದ ಪ್ರತಿಪಾದನೆ ಮಾಡಿದ್ದಾರೆ ಎಂದು ಹೇಳಬಹುದು. ಆಕ್ಸ್‌ಫರ್ಡ್‌ನಲ್ಲಿ ೧೮೩೦ರಿಂದಲೇ ಸಂಸ್ಕೃತ ಪ್ರಾಧ್ಯಾಪಕ ಪೀಠ ಇದ್ದರೂ ಸಹ, ಇಂತಹ ಏಕತ್ವದ ತಾತ್ತ್ವಿಕ ಧ್ವನಿ ಆವರೆಗೂ ಕೇಳಿಬಂದಿರಲಿಲ್ಲ.

ವಿವೇಕಾನಂದರು ಹುಟ್ಟಿ ಬೆಳೆದ ಬಂಗಾಳದಲ್ಲಿಯೂ ಸಹ ಉಪನಿಷತ್ತುಗಳ ತತ್ತ್ವಬೋಧೆಗೆ ವಾತಾವರಣ ಪ್ರೋತ್ಸಾಹದಾಯಕವಾಗಿರಲಿಲ್ಲ. ತಮ್ಮ ಕಾಲದ ಶ್ರೀಸಾಮಾನ್ಯನ ಆಧ್ಯಾತ್ಮಿಕ ಜೀವನ ಸ್ಥಿತಿಯ ಬಗ್ಗೆ ವಿವೇಕಾನಂದರಿಗೆ ಖೇದವಿತ್ತು. ಜನರಲ್ಲಿದ್ದುದು ಆಧ್ಯಾತ್ಮಿಕತೆ ಅಷ್ಟಾಗಿ ಇಲ್ಲದ ಪೌರಾಣಿಕ ಧರ್ಮ; ಆದರೂ ಅದಕ್ಕೆ ಉಪನಿಷತ್ತಿನ ರಂಗನ್ನು ಕೊಡುವುದಕ್ಕೆ ಸಾಧ್ಯ ಎಂದು ಅವರು ಭಾವಿಸಿದರು. ರಾಮಮೋಹನ ರಾಯ್ ಸ್ಥಾಪಿಸಿದ ಸುಧಾರಿತ ಬ್ರಹ್ಮಸಮಾಜಕ್ಕೆ ಉಪನಿಷತ್ತುಗಳೇ ತಳಹದಿ ಆಗಿದ್ದು, ಆತನು ಇಂಗ್ಲಿಷ್ ಮತ್ತು ಬಂಗಾಳಿಗೆ ಅನುವಾದಿಸಿದ ಅನೇಕ ಉಪನಿಷತ್ತುಗಳು ೧೮೧೯ರಲ್ಲಿ ಪ್ರಕಟವಾದುವು. ದೇವೇಂದ್ರನಾಥ ಠಾಕೂರರೂ ಉಪನಿಷತ್ತುಗಳನ್ನು ಒಪ್ಪಿಕೊಂಡು ತಮ್ಮ ಬ್ರಹ್ಮಸಮಾಜದಲ್ಲಿ ಅವುಗಳನ್ನು ಅಳವಡಿಸಿಕೊಂಡರು. ಇವರೆಲ್ಲರೂ ಉಪನಿಷತ್ತುಗಳಲ್ಲಿ ಒಂದು ಸಾಮಾನ್ಯ ದೈವವಾದವನ್ನು ಕಂಡರು; ಆದರೆ, ಉಪನಿಷತ್ತುಗಳಿಗೆ ವಿವೇಕಾನಂದರ ಪ್ರತಿಕ್ರಿಯೆ ಮಾತ್ರ ಆಳ

ವಾದುವಾಗಿತ್ತು; ವ್ಯಾಪಕವಾಗಿತ್ತು.

ಉಪನಿಷತ್ತುಗಳ ಬಗ್ಗೆ ತಮ್ಮ ದೃಷ್ಟಿಯನ್ನು ವಿವೇಕಾನಂದರು ಅಭಿವ್ಯಕ್ತಗೊಳಿಸಲು ಅನೇಕ ಕಾರಣಗಳಿದ್ದವು. ಬ್ರಹ್ಮಸಮಾಜದವರು ಕೇವಲ ದ್ವೈವಾದವನ್ನಷ್ಟೇ ಎತ್ತಿಹಿಡಿದರು; ಕ್ರೈಸ್ತ ಮಿಷನರಿಗಳು ಉಪನಿಷತ್ತುಗಳ ತತ್ತ್ವವನ್ನು ಪ್ರಾಚೀನ ವಿಶ್ವದೇವೈಕ್ಯವಾದ ಎಂದು ಮೂಗು ಮುರಿಯುತ್ತಿದ್ದರು; ಧರ್ಮದ ಬಗ್ಗೆ ಒಲವಿದ್ದ ದೇಶೀಯ ವಿದ್ಯಾವಂತರಿಗೂ ಸಹ ಉಪನಿಷತ್ತುಗಳಲ್ಲಿನ ವಿಶ್ವಧರ್ಮದ ತಳಹದಿಯ ಅರಿವಿರಲಿಲ್ಲ.

ಉಪನಿಷತ್ತುಗಳನ್ನು ಅರ್ಥೈಸುವುದರಲ್ಲಿ ವಿವೇಕಾನಂದರು ಹೊಸದೇನನ್ನು ಕಂಡರು? ಹಳೆಯದನ್ನು ಅಳಿಸದಂತೆ ಹಾಗೆಯೇ ಉಳಿಸಿಕೊಂಡು, ಅವರು ಎಲ್ಲರನ್ನೂ ಹೊಸದೊಂದು ಆದರ್ಶದೆಡೆಗೆ ಸೆಳೆದರು. ಸ್ವಾಮಿಜಿಗೆ ಸಹಜ ವೈಚಾರಿಕತೆಯಲ್ಲಿ ನಂಬಿಕೆ ಇತ್ತಾದರೂ ಬೇಕನ್, ಸ್ಪೆನ್ಸರ್ ಮುಂತಾದವರಿಂದ ಎರವಲು ತಂದಂತಹ ಕೃತಕ ವೈಚಾರಿಕತೆಯ ಬಗ್ಗೆ ಗೌರವವಿರಲಿಲ್ಲ. ನಮ್ಮ ನೈತಿಕ ಮತ್ತು ಆಧ್ಯಾತ್ಮಿಕ ಮುನ್ನಡೆಯು ವೇದಗಳ ಕಾಲದಿಂದ ವೇದಾಂತದ (ಉಪನಿಷತ್ತುಗಳ) ಕಾಲದವರೆಗೆ ಹೇಗೆ ಹಂತಹಂತವಾಗಿ ಸ್ಥಿತ್ಯಂತರಗೊಳ್ಳುತ್ತ, ಪ್ರತಿ ಹಂತದಲ್ಲೂ ಧಾರ್ಮಿಕ ತತ್ತ್ವಗಳನ್ನು ನವೀಕರಿಸಿಕೊಳ್ಳುತ್ತ ಸಾಗಿತೆಂಬುದರ ಕಡೆಗೆ ಅವರು ಲೋಕದ ಗಮನ ಸೆಳೆದರು.

ಸ್ವಾಮಿ ವಿವೇಕಾನಂದರು ತಮ್ಮ Vedic Religious Ideals (ವೇದಗಳ ಧಾರ್ಮಿಕ ಆದರ್ಶಗಳು) ಎಂಬ ಉಪನ್ಯಾಸದಲ್ಲಿ ಈ ಸೃಜನಶೀಲ ವಿಕಾಸ ಅಥವಾ ಮುನ್ನಡೆಯ ಕಲ್ಪನೆಯನ್ನು ವಿವರಿಸುತ್ತಾರೆ: "ಆದರೆ ಒಂದು ಸಂಗತಿ ಗಮನಾರ್ಹ: ಈ ಉಪನಿಷತ್ತುಗಳಲ್ಲಿರುವ ಕಲ್ಪನೆಗಳು ಅಭಿವೃದ್ಧಿ ಹೊಂದುತ್ತಲೇ ಸಾಗುತ್ತವೆ. ಪ್ರತಿಯೊಬ್ಬ ಋಷಿಯ ಮನಸ್ಸಿನ ಕಲ್ಪನೆ ಹಾಗೆ ಸಾಗುತ್ತಿದ್ದಂತೆಯೇ ಪ್ರತಿಬಿಂಬಿತವಾಗಿದೆ; ಹೇಗೆ ಮೊದಲು ಸ್ಥೂಲವಾಗಿದ್ದ ಕಲ್ಪನೆ ಕ್ರಮೇಣ ಸೂಕ್ಷ್ಮವಾಗುತ್ತ ನಡೆದು ಕೊನೆಗೆ ವೇದಾಂತವೆಂಬ ತಾತ್ತ್ವಿಕ ಹೆಸರನ್ನು ಪಡೆದ ಗುರಿಯನ್ನು ತಲುಪಿತು ಎಂಬುದನ್ನು ಕಾಣಬಹುದು". ಲಂಡನ್ನಿನಲ್ಲಿ ೧೮೯೬ರ ಅಕ್ಟೋಬರ್ ೨೦ರಂದು ನೀಡಿದ Maya and the Evolution of the Concept of God (ಮಾಯೆ ಹಾಗೂ ಈಶ್ವರನ ಕುರಿತಾದ ಕಲ್ಪನೆಯ ವಿಕಾಸ) ಎಂಬ ಉಪನ್ಯಾಸದಲ್ಲಿ ಸ್ವಾಮಿ ವಿವೇಕಾನಂದರು ಉಪನಿಷತ್ತಿನ ಋಷಿಗಳಿಗೇ ಈ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಬೆಳೆಯುತ್ತಿರುವ ಅರಿವಿತ್ತು; ಅವರಿಗೆ ಐತಿಹಾಸಿಕ ಪ್ರಜ್ಞೆಯಿದ್ದು ಆ ಪ್ರಕಾರವಾಗಿಯೇ ಅವರು ತಮ್ಮ ಕಲ್ಪನೆಗಳನ್ನು ನಮ್ಮ ಮುಂದಿಟ್ಟಿದ್ದಾರೆ ಎನ್ನುತ್ತಾರೆ. "ಮಾನವ ಸಮಾಜ ಹೇಗೆ ಬೆಳೆಯಬೇಕೆಂಬುದನ್ನು ತಿಳಿದಿದ್ದ ಅವರು, ತಮ್ಮ ಚಿಕಿತ್ಸೆಯನ್ನು ತಾಳ್ಮೆಯಿಂದ, ನಿಧಾನವಾಗಿ, ಆದರೆ ಖಚಿತವಾಗಿ, ನಡೆಸುತ್ತ ಬಂದರು; ಜನರನ್ನು ಹೀಗಳೆದು ಹೆದರಿಸಿ ಅಲ್ಲ; ಮೃದುವಾಗಿ, ಪ್ರೀತಿಯಿಂದ ಪದೋನ್ನತಿಗೆ ಮುನ್ನಡೆಸುವುದರ ಮೂಲಕ. ಕಾಲದಿಂದ ಕಾಲಕ್ಕೆ ನೈತಿಕ ಕಲ್ಪನೆ ಬದಲಾದಂತೆ, ಹಳೆಯ ದೇವತೆಗಳ ಕಲ್ಪನೆ ಹೇಗೆ ಹೊಂದಿಕೊಳ್ಳಲಾರದು ಎಂಬುದರ ಅರಿವು ಅವರಿಗಿತ್ತು; ನಾಸ್ತಿಕರ ಬೋಧನೆಯಲ್ಲೂ ಹುರುಳು ಇರುವುದು ಅವರಿಗೆ ಗೊತ್ತಿತ್ತು; ಆದರೆ ಯಾರು ಮಣಿಗಣಗಳ ನಡುವಣ ಸೂತ್ರವನ್ನು ಹರಿದು ಹೊಸ ಸಮಾಜದ ಗಾಳಿಗೋಪುರ ಕಟ್ಟಬಯಸುವರೋ ಅವರು ಯಶಸ್ವಿಯಾಗಲಾರರು ಎಂಬುದೂ ತಿಳಿದಿತ್ತು".

ಈಗ ಉಪನಿಷತ್ತುಗಳ ಬಗೆಗಿನ ವಿವೇಕಾನಂದರ ಮುಖ್ಯವಾದ ಹೇಳಿಕೆಗಳನ್ನು ನೋಡೋಣ. ವೇದೋಪನಿಷತ್ತುಗಳು ಶ್ರುತಿ ಎಂದರೆ ಭಗವಂತನಿಂದಲೇ ಬಂದ ಪ್ರಮಾಣವಾಕ್ಯಗಳು ಎಂಬ ಕಲ್ಪನೆಯನ್ನು ಅವರು ಬಿಟ್ಟುಕೊಡುವುದಿಲ್ಲ. ಋಷಿಗಳಿಗೆ ಆಗುತ್ತಿದ್ದ ದೈವವಾಣಿಯ ಅಂತರ್ದರ್ಶನವೇ ಹಂತಹಂತವಾಗಿ ಮುಂದುವರೆದು ಸ್ಥೂಲದಿಂದ ಸೂಕ್ಷ್ಮದ ಕಡೆಗೆ ಸಾಗಿತು ಎಂಬುದು ಅವರ ಅಭಿಪ್ರಾಯ. ಮಾನವನಿಗಾಗಿ ದೈವವಾಣಿ ಬರುವುದು ಒಂದೇ ಸಲ ಎಂದು ಯಾರೂ ಭಾವಿಸಬೇಕಾದದ್ದಿಲ್ಲ. ಇದು ಧರ್ಮದ ಬಗೆಗಿನ ಸ್ವಾಮಿಜಿಯದೇ ಆದ ನೂತನ ಕಲ್ಪನೆ. "ದೇವರ ಪುಸ್ತಕ ಕೊನೆಗೊಂಡಿತೆ? ಅಥವಾ ಅಂತರ್ದರ್ಶನ ಮುಂದುವರೆಯುತ್ತಿದೆಯೊ? ಲೋಕದ ಆಧ್ಯಾತ್ಮಿಕ ಅಂತರ್ದರ್ಶನದ ಇದೊಂದು ಅದ್ಭುತ ಪುಸ್ತಕ. ಬೈಬಲ್, ವೇದಗಳು, ಕೊರಾನ್ ಮತ್ತಿತರ ಪವಿತ್ರ ಪುಸ್ತಕಗಳೆಲ್ಲ ಅದರ ಪುಟಗಳು; ಅದರಲ್ಲಿ ಇನ್ನೂ ತಿರುವಿಹಾಕಬೇಕಾದ ಅನಂತ ಸಂಖ್ಯೆಯ ಪುಟಗಳಿವೆ" ಎನ್ನುತ್ತಾರೆ ಅವರು. ಇಲ್ಲಿ ನಮ್ಮ ಧಾರ್ಮಿಕ ಇತಿಹಾಸದಲ್ಲೇ ವಿವೇಕಾನಂದರು ಮೊದಲ ಬಾರಿಗೆ ಹೇಳಿರುವ ಎರಡು ಅಂಶಗಳಿವೆ: ಒಂದು, ಭಗವಂತನ ವಾಣಿಯ ಅಂತರ್ದರ್ಶನ ಒಮ್ಮೆ ಆಗಿ ಮುಗಿಯುವಂಥದಲ್ಲ, ಆಗುತ್ತಲೇ ಇರುವಂಥದು ಎಂಬುದು; ಇನ್ನೊಂದು, ಹಿಂದೂಗಳ ದೈವವಾಣಿ ಮಾತ್ರವೇ ದೈವವಾಣಿಯಲ್ಲ; ಇತರ ಧರ್ಮಗಳ ಶ್ರುತಿಗಳೂ ದೈವವಾಣಿಗಳೇ; ಮುಂದೆಯೂ ಇಂತಹ ದೈವವಾಣಿ ಮಾನವನಿಗೆ ಲಭಿಸಲಿದೆ, ಇದು ಮಾನವನು ತನ್ನೊಳಗಿನಿಂದ ಹೊರಹೊಮ್ಮಿಸುವ ಒಂದು ನಿರಂತರ ಪ್ರಕ್ರಿಯೆ.

ವೇದಗಳ ಕಾಲದಿಂದ ಉಪನಿಷತ್ತುಗಳ ಕಾಲದವರೆಗಿನ ಸೃಜನಶೀಲ ವಿಕಾಸದ ಕಲ್ಪನೆಯನ್ನು ಮುಂದಿಟ್ಟ ನಂತರ ವಿವೇಕಾನಂದರು ಉಪನಿಷತ್ ಸಾಹಿತ್ಯದ ಒಳಗೇ ವಿಕಾಸವನ್ನು ಗುರುತಿಸಬಹುದು ಎಂಬುದರ ಕಡೆಗೆ ಗಮನವನ್ನು ಸೆಳೆಯುತ್ತಾರೆ. ೧೯೦೦ರ ಮೇ ೨೮ರಂದು ಸ್ಯಾನ್ ಫ್ರಾನ್ಸಿಸ್ಕೋದಲ್ಲಿ

ಕೊಟ್ಟ Gita (ಗೀತಾ) ಎಂಬ ಉಪನ್ಯಾಸದಲ್ಲಿ "ಉಪನಿಷತ್ತುಗಳಲ್ಲಿನ ಆದರ್ಶವು ವೇದಗಳಲ್ಲಿನ ಆದರ್ಶಕ್ಕಿಂತ ಭಿನ್ನ" ಎಂದ ವಿವೇಕಾನಂದರು, ೧೮೯೬ರ ನವೆಂಬರ್ ೫ರಂದು ಲಂಡನ್ನಿನಲ್ಲಿ ಕೊಟ್ಟ The Freedom of the Soul (ಆತ್ಮದ ಮುಕ್ತಿ) ಎಂಬ ಉಪನ್ಯಾಸದಲ್ಲಿ "ಉಪನಿಷತ್ತುಗಳಲ್ಲಿ ವ್ಯಕ್ತಿಸ್ವರೂಪರಹಿತ ದೇವರು ಮತ್ತು ವ್ಯಕ್ತಿಸ್ವರೂಪರಹಿತ ಮಾನವ ಈ ಎರಡು ಚಿಂತನರೇಖೆಗಳು ಹಂತಹಂತವಾಗಿ ಮುಂದುವರೆಯುತ್ತ ಕೊನೆಗೆ ಒಂದಾಗುತ್ತವೆ; ಉಪನಿಷತ್ತುಗಳ ಕೊನೆಯ ಮಾತೇ **ತತ್ ತ್ವಂ ಅಸಿ** ಎಂಬುದು; ಅಲ್ಲಿಂದ ಮುಂದಕ್ಕೆ ಚೌಕಟ್ಟಿನಲ್ಲಿ ವಿವರಗಳನ್ನು ತುಂಬಲು ತಾತ್ತ್ವಿಕರಿಗೆ ಬಿಡಲಾಗಿದೆ" ಎಂದಿದ್ದಾರೆ.

ನಮ್ಮ ಎಲ್ಲ ನೈತಿಕ, ಆಧ್ಯಾತ್ಮಿಕ ಹಾಗೂ ಎಲ್ಲ ಬಗೆಯ ಧಾರ್ಮಿಕ ಕಲ್ಪನೆಗಳಿಗೂ ಮೂಲ ಉಪನಿಷತ್ತುಗಳೇ ಎಂಬ ನಂಬಿಕೆ ವಿವೇಕಾನಂದರದು. ತಮ್ಮ ಜಾಫ್ನ ಉಪನ್ಯಾಸದಲ್ಲಿ ಅವರು "ವೇದಾಂತವೆಂದರೆ ಉಪನಿಷತ್ತುಗಳು; ಅಲ್ಲದೆ ಭಾರತದ ಎಲ್ಲ ಮತಪಂಥಗಳೂ—ದ್ವೈತಾದ್ವೈತ ವಿಶಿಷ್ಟಾದ್ವೈತಗಳು, ಶೈವ ವೈಷ್ಣವ ಶಾಕ್ತ ಸೌರ ಗಾಣಪತ್ಯ—ಇನ್ನೂ ಯಾರು ಯಾರು ಹಿಂದೂಧರ್ಮದೊಳಗೆ ಬರುವರೋ ಅವರೆಲ್ಲ ಉಪನಿಷತ್ತುಗಳಿಗೆ ಆಭಾರಿಯಾಗಿರಬೇಕು... ಉಪನಿಷತ್ತುಗಳು ನಮ್ಮ ಜನಾಂಗದಲ್ಲಿ ಎಷ್ಟು ಆಳವಾಗಿ ಹುದುಗಿವೆಯೆಂದರೆ, ಅತ್ಯಂತ ಪ್ರಾಚೀನ ಧರ್ಮದ ಪ್ರತೀಕಗಳಲ್ಲೂ ನಿಮಗೆ ಉಪನಿಷತ್ತುಗಳ ಸಾಕಾರ ಅಭಿವ್ಯಕ್ತಿಗಳೇ ಸಿಕ್ಕುತ್ತವೆ" ಎನ್ನುತ್ತಾರೆ.

ಸ್ವಾಮಿ ವಿವೇಕಾನಂದರ ಪ್ರಕಾರ, ಉಪನಿಷತ್ತುಗಳಲ್ಲಿ ಕಂಡುಬರುವ ಮುಖ್ಯವಾದ ಸಂದೇಶವೇನು? ಈಗಾಗಲೇ ಉಲ್ಲೇಖಿಸಿರುವ **ತತ್ ತ್ವಂ ಅಸಿ** ಎಂಬ ಮಹಾವಾಕ್ಯ. ಇದು ಛಾಂದೋಗ್ಯೋಪನಿಷತ್ತಿನಲ್ಲಿ ಉದ್ದಾಲಕ ಆರುಣಿಯು ತನ್ನ ಮಗ ಶ್ವೇತಕೇತುವಿಗೆ ಹೇಳುವ ಮಾತು ಈ ಅದ್ವೈತದ ಆದರ್ಶ. ಇದನ್ನೇ ವಿವೇಕಾನಂದರು ಆಧ್ಯಾತ್ಮಿಕ ಜೀವನದ ಪರಾಕಾಷ್ಠೆ ಎನ್ನುತ್ತಾರೆ. ಆದರೆ ಅದ್ವೈತವೊಂದೇ ಉಪನಿಷತ್ತುಗಳ ಸಂದೇಶವಲ್ಲ, ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಎಲ್ಲ ಬಗೆಯ ಸಂದೇಶಗಳೂ ಉಪನಿಷತ್ತುಗಳಲ್ಲಿವೆ ಎಂಬುದನ್ನು ಅವರು ಒಪ್ಪುತ್ತಾರೆ. ಹೀಗೆ ಎಲ್ಲ ರೀತಿಯ ಧ್ವನಿಗಳೂ ಉಪನಿಷತ್ತುಗಳಲ್ಲಿ ಇರುವುದರಿಂದಲೇ ವಿವೇಕಾನಂದರು ಎಲ್ಲರಿಗೂ ತರತಮಗಳ ಸ್ತರಗಳಲ್ಲಿ ಹೊಂದುವಂಥ ಒಂದು ವಿಶ್ವಧರ್ಮದ ಬಗ್ಗೆ ಚಿಂತಿಸಿದ್ದು. ಈ ವಿಶ್ವಧರ್ಮದ ಕಲ್ಪನೆಗೆ ಬೆಂಬಲವಾಗಿ ನಿಂತದ್ದು ಅವರ ಗುರು ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಜೀವನ. ಇಂಥ ಒಂದು ನವೀನ ಕಲ್ಪನೆಯು ಪುರಾತನ ಶ್ರುತಿಗಳನ್ನು ನೆಮ್ಮಿ ನಿಲ್ಲುವಂತಾಗಿರುವುದು ಧಾರ್ಮಿಕ ಇತಿಹಾಸದಲ್ಲೇ ಒಂದು ಅಪೂರ್ವವಾದ ಸಂದರ್ಭ ಎನ್ನಬಹುದು. ವಿಶ್ವಧರ್ಮದ ಮೂಲಭೂತ ಅಂಶವೇ ಉಪನಿಷತ್ತುಗಳಲ್ಲಿ ಹೇಳಲ್ಪಟ್ಟಿರುವ ಏಕತಾ ತತ್ತ್ವ; ಸ್ವಾತಂತ್ರ್ಯದ ಆದರ್ಶದಲ್ಲಿ ಅಡಕವಾಗಿರುವ ಏಕತಾ ತತ್ತ್ವ, ನಮ್ಮೆಲ್ಲ ಪ್ರಯತ್ನಗಳ ಹಿಂದಿರುವ ಮುತ್ಸದ್ದಿತನವೂ ಸ್ಥಾಪಿಸಲು ಸೋತಿರುವ ವಿಶ್ವಶಾಂತಿ, ಮಾನವ ಸಮುದಾಯದ ಸ್ಥೈರ್ಯ ಮೊದಲಾದುವು ಸಾಧ್ಯವಾಗುವುದು ಉಪನಿಷತ್ತುಗಳು ಪ್ರತಿಪಾದಿಸುವ ಈ ಏಕತಾ ತತ್ತ್ವದಿಂದ. **What is Religion?** (ಧರ್ಮವೆಂದರೇನು?) ಎಂಬ ಉಪನ್ಯಾಸದಲ್ಲಿ ವಿವೇಕಾನಂದರೆನ್ನುತ್ತಾರೆ: "ವಿಶ್ವಹೃದಯದಲ್ಲಿ ಏಕತೆ ಇಲ್ಲದಿದ್ದರೆ ನಾವು ವೈವಿಧ್ಯತೆಯನ್ನು ಅರ್ಥ ಮಾಡಿಕೊಳ್ಳಲಾರೆವು. ಉಪನಿಷತ್ತುಗಳಲ್ಲಿನ ದೇವರ ಕಲ್ಪನೆ ಅಂಥಾದ್ದು".

ಛಾಂದೋಗ್ಯೋಪನಿಷತ್ತಿನ **ತತ್ ತ್ವಂ ಅಸಿ** ಎಂಬ ಮಹಾವಾಕ್ಯವನ್ನು ಆಧರಿಸಿಯೇ ವಿವೇಕಾನಂದರು ಮಾನವನ ದಿವ್ಯತೆಯನ್ನು ಕಲ್ಪಿಸಿರುವುದು. ಈ ದಿವ್ಯತೆ ಅಭಿವ್ಯಕ್ತಿಗೊಳ್ಳುವುದು ಮಾನವೀಯತೆಯಾಗಿ; ಅಲ್ಲಿಂದ ಹುಟ್ಟುವುದು ವೈಯಕ್ತಿಕ, ಸಾಮಾಜಿಕ, ರಾಷ್ಟ್ರೀಯ, ಅಂತರ್ರಾಷ್ಟ್ರೀಯ ನೈತಿಕತೆ; ಇದಕ್ಕೆ ಪೂರಕವಾಗಿ ನಿಲ್ಲುವುವೆಂದರೆ ಈಶೋಪನಿಷತ್ತಿನ **ತೇನ ತ್ಯಕ್ತೇನ ಭುಂಜೀಥಾಃ** ಹಾಗೂ ಬೃಹದಾರಣ್ಯಕೋಪನಿಷತ್ತಿನ **ದಾಮ್ಯತ, ದತ್ತ, ದಯಧ್ವಂ** ಇವೇ ಮೊದಲಾದ ಇನ್ನಿತರ ಉಪನಿಷತ್ ವಾಕ್ಯಗಳು. ವಿವೇಕಾನಂದರು ಉಪನಿಷತ್ತುಗಳ ಕೇವಲ ತಾತ್ತ್ವಿಕ, ಆಧ್ಯಾತ್ಮಿಕ ಅಂಶಗಳನ್ನು ಮಾತ್ರವೇ ಎತ್ತಿ ತೋರಿಸಲಿಲ್ಲ; ಅವುಗಳಲ್ಲಿರುವ ನೈತಿಕ ಅಂಶಗಳಿಗೂ ಪ್ರಾಮುಖ್ಯತೆ ತಂದುಕೊಟ್ಟರು.

ವಿವೇಕಾನಂದರು ವಿದೇಹಿಗಳಾಗಿ ಒಂದು ಶತಮಾನಕ್ಕಿಂತ ಹೆಚ್ಚು ಕಾಲವಾದರೂ ನಾವು ನಮ್ಮ ಸಮಸ್ಯೆಗಳನ್ನು ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕವಾಗಿಯೇ ಕಾಣುತ್ತಿದ್ದೇವೆಯೇ ಹೊರತು ಅವುಗಳಿಗೆ ನೈತಿಕ–ಆಧ್ಯಾತ್ಮಿಕ ಆಯಾಮವಿರಬಹುದೆಂದೂ, ಅವುಗಳನ್ನು ಆ ಸ್ತರದಲ್ಲಿ ಎದುರಿಸುವ ಮೂಲಕ ಅವುಗಳನ್ನು ಪರಿಹರಿಸಿಕೊಳ್ಳುವ ಸಾಧ್ಯತೆ ಇರಬಹುದೆಂದೂ ಯೋಚಿಸುತ್ತಿಲ್ಲ.

ಸ್ವಾಮಿ ವಿವೇಕಾನಂದರು ಇಂಗ್ಲೆಂಡಿನಲ್ಲಿ ನೀಡಿದ ಪ್ರವಚನಗಳನ್ನು ಇದೀಗ ಓದುತ್ತಿರುವೆ. ನನಗೆ ಇಲ್ಲಿಯ ತನಕ ಅವು ದೊರೆತಿರಲಿಲ್ಲ. ವಾಗ್ಮಿತೆಯ ಶಕ್ತಿಯಲ್ಲಿ ಈತ ನಿಸ್ಸೀಮ, ಅದ್ಭುತ.. ಯಾವುದೇ ದೃಷ್ಟಿಯಿಂದಲೂ ಸ್ವಾಮಿಜಿ ಮಾನವಕುಲಕ್ಕೆ ಹೆಮ್ಮೆಯ ವ್ಯಕ್ತಿಯಾಗಿದ್ದಾರೆ.

– ವಿಲಿಯಂ ಜೇಮ್ಸ್ (ಪ್ರಸಿದ್ಧ ಚಿಂತಕ)